*ಕೆ.ಎಸ್. ವರಲಕ್ಷ್ಮಿ ನಾ. ರೆಡ್ಡಿ, ಕೆ.ಜಿ.ಎಫ್.*
*ನ್ಯಾಯಾಧೀಶರು ಕೊಡುವ ಶಿಕ್ಷೆಗೂ, ದೇವರು ಕೊಡುವ ಶಿಕ್ಷೆಗೂ ಇರುವ ವ್ಯತ್ಯಾಸವೇನು?*



ದೇವನಿತ್ತ ಶಿಕ್ಷೆಗೆ ಮೇಲ್ಮನವಿ ಸಲ್ಲಿಸಲಾಗದು!

*ರಾಘವೇಂದ್ರ ನಲವಡೆ, ನರಗುಂದ*
*ಬದುಕು ಒಂದು ಹೋರಾಟ ಎನ್ನುತ್ತಾರೆ; ನಿಮಗೇನೆನ್ನಿಸುತ್ತದೆ?*
ವಿವಾಹದ ನಂತರ.... ಹಾಗೆನ್ನಿಸುತ್ತದೆ!

*ವಿ. ಹೇಮಂತಕುಮಾರ್, ಬೆಂಗಳೂರು*
*ನೆನಪಿನ ದೋಣಿಯಲ್ಲಿ ಸಾಗಿದರೆ ತೀರವನ್ನು ಮುಟ್ಟಬಹುದೆ?*
ಊಹೂಂ. ದೋಣಿಯಿಂದ ಹೊರಬರುವವರೆಗೂ ದಡ ಕಾಣದು.

*ಜಾಕೋಬ್ ಡಿಸೋಜ, ಕುರುವಳ್ಳಿ*
*ಶತೃವಿನಿಂದ ದ್ರೋಹವಾದರೂ ಸಹಿಸಬಹುದು; ಮಿತ್ರನಿಂದ ದ್ರೋಹವಾದರೆ?*
ಇದು ಟೂ ಇನ್ ಒನ್ ಕಾಲ ಬಾಸ್! ಆದ್ದರಿಂದ ಮಿತ್ರರೇ ಶತೃಗಳೂ ಆಗಿರುವ ಸಾಧ್ಯತೆ ಇದೆ!

*ಎಂ.ಎಸ್.ಗುರುರಾಜಾಚಾರು, ಬಳ್ಳಾರಿ*
*ರಾಜಕೀಯ ನಾಯಕರಲ್ಲಿ ಉದಾರವಾಗಿ ಸಿಗುವ ವಸ್ತು ಯಾವುದು?*



ಆಶ್‌ವಾಸನೆ!

*ರಮೇಶ ವಿರೂಪಾಕ್ಷಪ್ಪ, ಕಾಮನೂರು*
*ಸಿನಿಮಾಗಳಲ್ಲಿ ಹೀರೋ ನನ್ನ ಹಿಂದೆ ಆರು ಕೋಟಿ ಕನ್ನಡಿಗರಿದ್ದಾರೆ ಎನ್ನುವುದು ಏಕೆ?*
ಕೆಟ್ಟ ಕನ್ನಡ ಮಾತನಾಡಿದ್ದಕ್ಕೆ ಅಷ್ಟೂ ಕನ್ನಡಿಗರು ಅಟ್ಟಿಸಿಕೊಂಡು ಬರುತ್ತಿದ್ದಾರೆಂದು ತಿಳಿಸಲು!

*ಅಜಿತ್ ಸಾಲ್ಯಾನ್, ಪಡುಬಿದ್ರಿ*
*ವಿವಾಹನಂತರ ಗಂಡು ಹೆಣ್ಣಿಂದ ಮುಚ್ಚಿಟ್ಟುಕೊಳ್ಳುವ ವಿಷಯ ಏನು?*
ನನ್ನ ಸಂಸಾರದ ಹಿತದೃಷ್ಟಿಯಿಂದ ಇದಕ್ಕೆ ನಾನು ಉತ್ತರಿಸಲಾರೆ!

*ಮುರಲೀಧರ ಕುಲಕರ್ಣಿ, ಬೀದರ್*
*ಸರ್ವಸಂಗ ಪರಿತ್ಯಾಗಿಗಳಾದ ಮಠಾಧೀಶರಿಗೇಕೆ ಎ.ಸಿ. ಕಾರು, ಬಂಗಲೆ?*
ಡ್ರೈವರ್, ಅಡಿಗೆಯವರಿಗೆ ಸುಖವಿಯಾಗದಿರಲೆಂದು ಎಂದರಂತೆ!

*ಕುಮಾರ ಚಲವಾದಿ, ಹೊಳೆನರಸಿಪುರ*
*ಮಳೆ ಬರಬೇಕಾದರೆ ಕಪ್ಪೆಗಳ ಮದುವೆ ಒಳ್ಳೆಯದೋ, ಕತ್ತೆಗಳ ಮದುವೆ ಒಳ್ಳೆಯದೋ?*
ಛೆ! ನಿಮಗೆ someಸಾರ ಬೇಕೆಂಬ ಸ್ವಾರ್ಥಕ್ಕೆ ಅವನ್ನು ಸಂಸಾರಕೂಪಕ್ಕೆ ತಳ್ಳುವುದು ತರವಲ್ಲ!

*ಪ್ರೆಸ್ ಶೇಖರಿ, ಗೌರಿಬಿದನೂರು*
*ರಾಜಕಾರಣದ ಪಾಠಗಳನ್ನು ಕಲಿಯಲು ಯಾವ ವ್ಯಕ್ತಿಯ ಬಳಿ ಹೋಗಲಿ?*
ಪದವಿಗಾದರೆ ರೆಡ್ಡಿಗಳ ಬಳಿ, ಪಿ.ಹೆಚ್.ಡಿಗಾದರೆ ಗೌಡರ ಬಳಿ!

*ಎಂ.ಬಿ. ಪೋದಾನಪುರ, ಸವದತ್ತಿ*
*ವಿಧವೆ ಮರುಮದುವೆಯಾಗುವಾಗ ಮೊದಲನೆಯ ಗಂಡನನ್ನು ಮರೆತುಬಿಡುವಳೆ?*
ಇಲ್ಲ, ಥ್ಯಾಂಕ್ಸ್ ಫಾರ್ ಮೇಕಿಂಗ್ ಮಿ ಎ ವಿಧವೆ ಎನ್ನುವಳು!

*ಡಾ. ಸಿ.ಎ. ಹಿರೇಮಠ, ಶಿವಮೊಗ್ಗ*
*ಬುದ್ಧಿಜೀವಿ ಎನ್ನಿಸಿಕೊಳ್ಳಲು ಅಲ್ಪಸಂಖ್ಯಾತರ ತುಷ್ಟೀಕರಣ ಅಗತ್ಯವೆ?*
ಎಲ್ಲಕ್ಕಿಂತ ಮುಖ್ಯವಾಗಿ ಬ್ರಾಹ್ಮಣರನ್ನು, ದೇವರನ್ನು ಬೈಯುವುದು ಅಗತ್ಯ!

*ಪಿ. ಗೋವಿಂದರಾಜ್, ಶಿವಮೊಗ್ಗ*
*ನವವಧುವನ್ನು ಮನೆ ತುಂಬಿಸಿಕೊಳ್ಳುವಾಗ ತಿನ್ನುವ ಅಕ್ಕಿಯನ್ನು ಒದ್ದು ಒಳಬರುವುದು ಸರಿಯೆ?*
ಅಕ್ಕಿಯನ್ನು ಒದ್ದು ಒಳಗೆ ಹಾಕುವಲ್ಲವೇ.. ಹೊರಗೆ ಹಾಕದಿರುವುದರಿಂದ ಓ.ಕೆ.

*ಶ್ರೀಮತಿ ಸುನಂದ, ಗೌರಿಬಿದನೂರು*
*ಕುಡುಕ ಗಂಡ ಇರುವುದು ಗೊತ್ತು, ಕುಡುಕ ಪ್ರಿಯಕರ ಇದ್ದಾನೆಯೇ?*
ನಿನ್ನೆಯ ಕುಡುಕ ಪ್ರಿಯಕರನೇ ಇಂದಿನ ಕುಡುಕ ಗಂಡ!

*ವೆಂಕಟೇಶ ಎಂ. ಪೈ, ಹೊನ್ನಾವರ*
*ಹಣ ಮಾತನಾಡುವಾಗ ಸತ್ಯ ಮರೆಯಾಗುವುದೇಕೆ?*
ಅದನ್ನು ಸತ್ಯಾ ಬಿದ್ದಿದ್ದಾ ಎಂದು ಕೇಳುವವರಿರುವುದಿಲ್ಲವಾದ್ದರಿಂದ!

## ಬಹುಮಾನಿತ ಪ್ರಶ್ನೆ

*ಎಂ.ಎಸ್. ಸೋಮಶೇಖರ್, ಮೈಸೂರು*
*ಯಡಿಯೂರಪ್ಪ ಮುಖ್ಯಮಂತ್ರಿಯಾಗುವ ಬದಲು ಪ್ರಖ್ಯಾತ ಜಾದೂಗಾರನಾಗಿದ್ದರೆ ಹೇಗಿರುತ್ತಿತ್ತು?*
ಹುಬ್ಬುಗಂಟು ಕೊಂಚ ಕಡಿಮೆಯಾಗಿರುತ್ತಿತ್ತು!

*ಸುನಿಲ್ ಎಚ್.ಜಿ, ಬೈಂದೂರು*
*ಹುಟ್ಟು ಸಾವಿನಲ್ಲಿರುವ ವ್ಯತ್ಯಾಸಗಳೇನು?*
ವೈದ್ಯರ ಬಿಲ್‌ನ ಮೊತ್ತ!

*ರವಿ ಭಟ್, ಬೆಂಗಳೂರು*
*ನಮ್ಮ ಮಕ್ಕಳು ಕನ್ನಡದಲ್ಲಿ ಓದಬೇಕೋ, ಇಂಗ್ಲಿಷ್‌ನಲ್ಲಿ ಓದಬೇಕೋ?*
ಒಂದು ಮುಖ್ಯರಸ್ತೆ, ಇನ್ನೊಂದು ಅಡ್ಡರಸ್ತೆ. ವಿಕಾಸ ಪೂರ್ಣವಾಗಬೇಕಾದರೆ ಎರಡೂ ಬೇಕು!

*ಡಿ.ಎಸ್. ಪಂಕಜ, ಬೆಂಗಳೂರು*
*ಹಸಿರೆಲ್ಲಾ ಅಳಿಸಿ, ಉಸಿರು ನಿಲ್ಲುವಂತೆ ಮಾಡುತ್ತಿದ್ದಾರಲ್ಲಾ...?*



ಸರ್ಕಾರ ಎಚ್ಚೆತ್ತಿದೆ. ಈಗ ಎಲ್ಲಾ ಆಟೋಗಳು, ಗೋಡೆಗಳು ಹಸಿರಾಗುವುವಂತೆ!

*ಬೆಳ್ಳಾವೆ ರಮೇಶ್, ಬೆಂಗಳೂರು*
*ಅಮ್ಮ-ಅಪ್ಪ ಒಂದು ಕಡೆ, ಅತ್ತೆ-ಮಾವ ಇನ್ನೊಂದೆಡೆ; ಯಾರು ಹೆಚ್ಚು, ಯಾರು ಕಡಿಮೆ?*
ಉತ್ತರಕ್ಕೆ ಅವರುಗಳ ಆಸ್ತಿ ವಿವರದ ಅಗತ್ಯವಿದೆ!

*ಮಲ್ಲಿಕಾರ್ಜುನ ಹ. ಬಗಲಿ*
*ದರೋಡೆಕೋರ, ರೇಪಿಸ್ಟ್, ದೇಶದ್ರೋಹಿಗಳ ಮುಖ ಮುಚ್ಚಿ ವಾರ್ತೆಗಳಲ್ಲಿ ತೋರಿಸುವುದೇಕೆ?*
ಮುಂದೆ ಮಂತ್ರಿಗಳಾಗುವ ಅವರ ಮುಖ ಜನಕ್ಕೆ ಈಗಲೇ ತಿಳಿಯದಿರಲೆಂದು!

*ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ*
*ಪ್ರೇಮಿಗಳಿಗೂ, ಕವಿಗಳಿಗೂ ಏನೋ ಸಾಮ್ಯತೆ ಇರುವಂತಿದೆಯಲ್ಲವೇ?*
ನಿಜ, ಇಬ್ಬರಿಗೂ ಚಂದಿರವದನ ಕಂಡರೆ ಹುಚ್ಚು ಕೆರಳುತ್ತದೆ!

■ ರಾಮ್